ಪಿಡಬ್ಲ್ಯೂ -1 ಓ.ಎಸ್.ನಂ. 203/2019

ದಿನಾಂಕಃ 22-07-2024 ರಂದು ಸಾಕ್ಷಿಗೆ ಪ್ರಮಾಣ ವಚನ ಭೋದಿಸಲಾಯಿತು.
ಪಾಟೀಸವಾಲು ಪ್ರತಿವಾದಿ ಪರ ವಕೀಲರಾದ ಶ್ರೀ. ಎಸ್ ಆರ್ ಬಿ ವಕೀಲರಿಂದ

ನಿಮ್ಮ ತಂದೆ ಮತ್ತು ನಿಮ್ಮ ಅಜ್ಜನ ಸ್ವಂತ ಊರು ಯಾವುದು ಎಂದರೆ ಧನಮಿಟ್ಟೇಪಲ್ಲಿ. ನನ್ನ ತಾಯಿಯ ಹೆಸರು ಗಂಗಮ್ಮ. ನನ್ನ ತಾಯಿ ಇರುವುದಿಲ್ಲ. ನಾನು 7 ವರ್ಷ ಇರುವಾಗಲೇ ತೀರಿಕೊಂಡಿರುತ್ತಾರೆ. ನಿಮ್ಮನ್ನು ಯಾವ ಊರಿನ ವ್ಯಕ್ತಿಗೆ ಮದುವೆ ಮಾಡಿರುತ್ತಾರೆ ಎಂದರೆ ಕೊರ್ಲಪರ್ಲ್ಲಿ . ನಿಮ್ಮ ತಾಯಿ ಕೊರ್ಲಪಲ್ಲಿಯಲ್ಲಿ ಮರಣ ಹೊಂದಿರುತ್ತಾರೆ ಎಂದರೆ ನನ್ನನ್ನು ಮದುವೆ ಮಾಡಿಕೊಟ್ಟಿರುವುದು ಕೊರ್ಲಪಲ್ಲಿಗೆ. ನಿಮ್ಮ ತಾಯಿಗೆ ಬೇರೆ ಮಕ್ಕಳು ಇರುತ್ತಾರೆ ಎಂದರೆ ಇಲ್ಲ. ನಾನು ಓದಿರುವುದಿಲ್ಲ. ನೀವು ಹುಟ್ಟಿದ್ದು ಬೆಳೆದಿದ್ದು ಕೊರ್ಲಪಲ್ಲಿಯಲ್ಲಿ ಎಂದರೆ ಅಲ್ಲ ಧನಮಿಟ್ಟೇಪಲ್ಲಿಯಲ್ಲಿ. ನಿಮ್ಮ ತಾಯಿ ಗುರ್ರಪ್ಪನ ಜೊತೆ ಸಂಸಾರ ಮಾಡಿರುವುದಿಲ್ಲ ಕೊರ್ಲಪಲ್ಲಿಯ ಬೇರೆ ವ್ಯಕ್ತಿಯ ಜೊತೆ ಸಂಸಾರ ಮಾಡಿರುತ್ತಾರೆ ಎಂದರೆ ಸರಿಯಲ್ಲ. ಕೊರ್ಲಪಲ್ಲಿಗೆ ನನ್ನನ್ನು ಕೊಟ್ಟಿರುತ್ತಾರೆ. ನಿಮ್ಮ ತಂದೆಯವರು ಬೋವಿ ಜನಾಂಗ ಎಂದರೆ ಸರಿ. ಅದು ಎಸ್ ಸಿ ಜನಾಂಗಕ್ಕೆ ಬರುತ್ತದೆ ಎಂದರೆ ಹೌದು. ನಿಮ್ಮ ತಂದೆಗೆ ಅವರ ತಂದೆಯಿಂದ ಯಾವುದೇ ಆಸ್ತಿ ಬಂದಿರುವುದಿಲ್ಲ ಎಂದರೆ ನಮ್ಮ ಅಜ್ಜನಿಂದ ಬಂದಿರುತ್ತದೆ. ನಿಮ್ಮ ತಾತನ ಆಸ್ತಿ ಎಂದು ತೋರಿಸಲು ದಾಖಲೆ ಇದೆಯಾ ಎಂದರೆ ನನ್ನ ತಾತನದ್ದು ಎಂದು ಕೊಟ್ಟಿರುತ್ತೇನೆ. ನಾನು ಧನಮಿಟ್ಟೇಪಲ್ಲಿಯಲ್ಲಿ ಓದಿರುತ್ತೇನೆ. ನಿಮ್ಮತಂದೆ ಬಂಡೆ ಕೆಲಸ ಮಾಡುತ್ತಾರೆ ಎಂದರೆ ಅಲ್ಲ ಹಾಲು ಮಾರಾಟ ಮಾಡುತ್ತಾರೆ. ನನ್ನ ತಂದೆ ಎರಡು ಎಮ್ಮೆ ಇಟ್ಟುಕೊಂಡಿದ್ದರು. ಸೀಮೆ ಹಸು ಹಾಲಿಗಿಂತ ಎಮ್ಮೆ ಹಾಲಿಗೆ ಜಾಸ್ತಿ ಬೆಲೆ ಎಂದರೆ ಹೌದು. ಎಮ್ಮೆ ಹಾಲಿಗೆ ಸಂಪಾದನೆ ಜಾಸ್ತಿ ಎಂದರೆ ಹೌದು. ನಿಮ್ಮ ತಂದೆ ನಿಮ್ಮ ಕುಲವೃತ್ತಿಯಾದ ಬಂಡೆ ಹೊಡೆಯುವ ಕೆಲಸ ಮಾಡುತ್ತಿದ್ದರು ಎಂದರೆ ಇಲ್ಲ. ನಿಮ್ಮ ತಂದೆ ಹಾಲಿನಿಂದ ಬಂಡೆ ಕೆಲಸದಿಂದ ಬಂದಆದಾಯದಿಂದ ದಿಃ11-4-1977 ರಲ್ಲಿ ದಾವಾ ಆಸ್ತಿ 1 ನೇ ಐಟಂ ಸ್ವತ್ತನ್ನು ಖರೀದಿ

ಮಾಡಿರುತ್ತಾರೆ ಎಂದರೆ ಸರಿಯಲ್ಲ ನನ್ನ ಅಜ್ಜನದ್ದೆ ಆಸ್ತಿ. ಆಸ್ತಿ ನಿಮ್ಮ ತಂದೆಯ ಸವಯಾರ್ಜಿತ ಆಸ್ತಿ ಎಂದರೆ ಸರಿಯಲ್ಲ.

ನಿಮ್ಮ ತಂದೆ ದಿಃ28-03-2019 ರಲ್ಲಿ 2 ನೇ ಪ್ರತಿವಾದಿ ರೆಡ್ಡೆಪ್ಪನಿಗೆ ದಾನ ಪತ್ರ ಬರೆದುಕೊಟ್ಟಿರುತ್ತಾರೆ ಎಂದರೆ ಅದು ನನ್ನ ತಾತನ ಆಸ್ತಿ ಹೇಗೆ ಬರೆದುಕೊಡುತ್ತಾರೆ. ನಿಮ್ಮ ತಾತನ ಆಸ್ತಿ ಅಲ್ಲ ಎಂದರೆ ಸರಿಯಲ್ಲ. ಮನೆ ಇದೆ ಅಂತ ಹೇಳಿದ್ದು ಅದು ಎಷ್ಟು ಅಡಿ ಇದೆ ಅಂತ ಗೊತ್ತ ಎಂದರೆ ಗೊತ್ತು ಉದ 40, ಪೂಪಶ್ಚಿಮ 30. ಸರ್ವೆ ನಂ. 6/1 ಧಮಿಟ್ಟಹಳ್ಳಿ, ನಾಗಸಂದ್ರಗಡ್ಡದ ಸರ್ವೆ ನಂ. 19. ಮನೆ ಸರ್ಕಾರದ ಸರ್ವೆ ನಂಬರ್ ನಲ್ಲಿ ಇರುತ್ತದೆ ಎಂದರೆ ಹೌದು. ಅದು ಸರ್ಕಾರಿ ಸರ್ವೆ ನಂಬರ್ ನಲ್ಲಿ ಇರುವುದರಿಂದ ನೀವ್ಯಾರೂ ಭಾಗ ಮಾಡಿಕೊಳ್ಳಲು ಬರುವುದಿಲ್ಲ ಎಂದರೆ ಭಾಗ ಬೇಕು. 1 ಮತ್ತು 2 ನೇ ಪ್ರತಿವಾದಿಗೆ ತೊಂದರೆ ಕೊಡಲು ಸುಳ್ಳು ದಾವೆ ಹಾಕಿರುತ್ತೀರಿ ಎಂದರೆ ಸರಿಯಲ್ಲ. ನೀವು ಹಾಜರುಪಡಿಸಿರುವ ನಿಪಿ-8 ಮತ್ತು ನಿಪಿ- 12 ಪಂಚಾಯ್ತಿ ದಾಖಲೆಗಳಲ್ಲಿ ಇರುವುದಿಲ್ಲ ಈ ದಾವೆಗಾಗಿ ಸೃಷ್ಟಿ ಮಾಡಿಕೊಂಡಿರುತ್ತೀರಿ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲಃ

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಸಾಕ್ಷಿಯ ಹೇಳಿಕೆಯನ್ನು ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸ ಇದೆ,

ಪ್ರಧಾನ ಸಿ.ನ್ಯಾ ಮತ್ತು ಜೆ.ಎಂ.ಎಫ್.ಸಿ.,
ಚಿಂತಾಮಣಿ.